ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಪರಿಷತ್ತಿನ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ವಾಣಿ ದಿನಾಂಕ : DATE : 13/12/20

# ಪರಿಷತ್ ಅಧಿವೇಶನ 15ಕ್ಕೆ ನಿಗದಿ

## ಕಾರ್ಯದರ್ಶಿಗೆ ಸಭಾಪತಿ ಸೂಚನೆ | ಅಸಮರ್ಪಕ ಅವಿಶ್ವಾಸ ಪ್ರಸ್ತಾಪ ತಿರಸ್ಕೃತ

ವಿ.ವಾ. 13-12-20

ಬೆಂಗಳೂರು: ವಿಧಾನಪರಿಷತ್ ಅಧಿವೇಶನ ಮಂಗಳವಾರ (ಡಿ.15) ಒಂದು ದಿನದಮಟ್ಟಿಗೆ ನಡೆಯು ವುದು ಖಚಿತವಾಗಿದೆ. ಸಭಾಪತಿ ಕೆ.ಪ್ರತಾಪಚಂದ್ರಶೆಟ್ಟಿ ಈ ಕುರಿತು ಪರಿಷತ್ ಕಾರ್ಯದರ್ಶಿಗೆ ಶನಿವಾರ ಸೂಚನೆ ನೀಡಿದ್ದಾರೆ. ಆದರೆ ಅಂದಿನ ಕಾರ್ಯಸೂಚಿ ಏನು ಎಂಬುದು ಕುತೂಹಲಕ್ಕೆ ಕಾರಣವಾಗಿದೆ.

ಅಧಿವೇಶನ ಕರೆಯುವ ವಿಚಾರದಲ್ಲಿ ರಾಜ್ಯಪಾಲರು ಸೂಕ್ತ ಕ್ರಮಕೈಗೊಳ್ಳುವ ಮುನ್ನವೇ ಸರ್ಕಾರದ ಪತ್ರಕ್ಕೆ ಸಭಾಪತಿ ಸ್ಪಂದಿಸಿ; ಕೋರಿಕೆಯಂತೆ ಒಂದು ದಿನದ ಅಧಿವೇಶನ ನಿಗದಿಪಡಿಸಿದ್ದಾರೆ. ಬಿಜೆಪಿ ಎಂಎಲ್ಸಿಗಳ ನಿಯೋಗವು ಶುಕ್ರವಾರ ರಾಜಭವನದ ಕದತಟ್ಟಿತ್ತು. ಡಿ.15ರವರೆಗೆ ಅಧಿವೇಶನ ನಡೆಸಬೇಕೆಂಬ ನಿರ್ಧಾರವನ್ನು ಸಭಾಪತಿ ಕಡೆಗಣಿಸಿ, ಹಠಾತ್ ಅನಿರ್ದಿಷ್ಟಾವಧಿಗೆ ಮುಂದೂಡಿದ್ದಾರೆ ಎಂದು ರಾಜ್ಯಪಾಲರಿಗೆ ದೂರು ಸಲ್ಲಿಸಿತ್ತು. ಕಾನೂನು ತಜ್ಞರ ಜತೆಗೆ ಚರ್ಚಿಸಿ ಸೂಕ್ತ ಕ್ರಮವಹಿಸುವುದಾಗಿ ರಾಜ್ಯಪಾಲ ವಜುಭಾಯಿ ವಾಲಾ ಭರವಸೆ ನೀಡಿದ್ದರು. ಪರಿಷತ್ ಅಧಿವೇಶನ ಕರೆಯಲು ಕಾರ್ಯದರ್ಶಿಗೆ ಸೂಚಿಸಿರುವುದನ್ನು ಕೆ. ಪ್ರತಾಪಚಂದ್ರಶೆಟ್ಟಿ 'ವಿಜಯವಾಣಿ'ಗೆ ದೃಢಪಡಿಸಿದರು. ಅಲ್ಲದೆ, ಬಿಜೆಪಿಯ 11 ಸದಸ್ಯರು ಪ್ರಸ್ತಾಪಿಸಿದ್ದ ಅವಿಶ್ವಾಸ ನಿರ್ಣಯ ಅಸಮರ್ಪಕವಾಗಿರುವ ಕಾರಣಕ್ಕೆ ತಿರಸ್ಕರಿಸಿರುವೆ. ಪಕ್ಷಪಾತವೆಂದರೆ ಏನು? ಹೇಗೆ? ಇದಕ್ಕೆ ಪುಷ್ಟಿ ನೀಡಬಲ್ಲ ಆರೋಪಗಳನ್ನು ವಿವರಿಸಿಲ್ಲ. ಹೀಗಾಗಿ ತಿರಸ್ಕರಿಸುವ ನಿರ್ಧಾರ ಕೈಗೊಂಡು ಕಡತದಲ್ಲಿ ದಾಖಲಿಸಿ, ಸಂಬಂಧಿಸಿದ ಸದಸ್ಯರಿಗೆ ಮಾಹಿತಿ ನೀಡಲು ಸೂಚಿಸಿರುವೆ ಎಂದರು.

ಸ್ಥಳೀಯ ಗ್ರಾಮೀಣ ಸಂಸ್ಥೆಗಳನ್ನು ಪ್ರತಿನಿಧಿಸುತ್ತಿರುವ 25 ಸದಸ್ಯರು ಅಧಿವೇಶನ ಮುಂದೂಡಿ, ಗ್ರಾಪಂ ಚುನಾವಣೆ ಪ್ರಚಾರ ಕಾರ್ಯದಲ್ಲಿ ತೊಡಗಲು ಅವಕಾಶ ಮಾಡಿಕೊಡಬೇಕು ಎಂದು ಮನವಿ ಮಾಡಿದ್ದರು. ಸದನ ಸಮಾವೇಶಗೊಂಡಿದ್ದ ಗುರುವಾರದ ಕಾರ್ಯಕಲಾಪ ಪಟ್ಟಿಯಂತೆ ಎಲ್ಲ ಚರ್ಚೆಯಾಗಿದ್ದು, ಬೇರೇನೂ ವಿಷಯಗಳಿದ್ದಿಲ್ಲ. ಹೀಗಾಗಿ ಅಧಿವೇಶನ ಅನಿರ್ದಿಷ್ಟಾವಧಿಗೆ ಮುಂದೂಡಿರುವೆ ಎಂದು ಪ್ರತಾಪಚಂದ್ರ ಶೆಟ್ಟಿ ತಮ್ಮ ನಿರ್ಧಾರ ಸಮರ್ಥಿಸಿಕೊಂಡರು.

### ಅವಿಶ್ವಾಸದ ಚರ್ಚೆ ಅಪ್ರಸ್ತುತ



ಬಿಜೆಪಿಯ 11 ಸದಸ್ಯರು ಸಲ್ಲಿಸಿದ್ದ ಅವಿಶ್ವಾಸದ ನಿರ್ಣಯ ಪ್ರಸ್ತಾಪ ತಿರಸ್ಕರಿಸಿರುವ ಕಾರಣ ಅದೀಗ ಅಪ್ರಸ್ತುತವಾಗಿದೆ. ಈ ಕುರಿತು ಚರ್ಚಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಬೇಕಿದ್ದರೆ ಮತ್ತೊಮ್ಮೆ ಪ್ರಸ್ತಾಪ ಸಲ್ಲಿಸಲಿ. ಮಂಗಳವಾರದ ಅಧಿವೇಶನಕ್ಕೆ ಸದ್ಯದವರೆಗೆ ಯಾವುದೇ ಅಜೆಂಡಾಗಳಿಲ್ಲ. ಗೋಹತ್ಯೆ ನಿಷೇಧ ಮಸೂದೆ ಬೇಕಾದರೆ ಚರ್ಚೆಗೆ ಮಂಡಿಸಬಹುದು ಎಂದು ಕೆ.ಪ್ರತಾಪಚಂದ್ರಶೆಟ್ಟಿ ಹೇಳಿದರು.